ಕರ್ನಾಟಕ ಸರ್ಕಾರ

ಸಹಕಾರ ಇಲಾಖೆ

ಸಂಘಗಳ ನೋಂದಣಾಧಿಕಾರಿಗಳ Registrar of Societies Bangalore Urban District ಬೆಂಗಳೂರು ನಗರ ಜಿಲ್ಲೆ

ಸಂಘಗಳ ನೋಂದಣಾಧಿಕಾರಿಗಳ ಕಛೇರಿ
ಬೆಂಗಳೂರು ನಗರ ಜಿಲ್ಲೆ
ನಂ. 1, ಆಲಿ ಅಸ್ಕರ್ ರಸ್ತೆ
ಬೆಂಗಳೂರು – 560 052

ದಿನಾಂಕ : 10-07-2009.

## ನೋಂದಣಿ ಪ್ರಮಾಣ ಪತ್ರ

ನೋಂದಣಿ ಸಂಖ್ಯೆ : SOR/BLU/DR/372/2009-10.

ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 (1960 ನೆಯ ಇಸವಿ 17ನೇ ಕ್ರಮಾಂಕದ ಕರ್ನಾಟಕ ಅಧಿನಿಯಮದ) ಮೇರೆಗೆ ಈ ಕೆಳಕಂಡ ಹೆಸರಿನ ಕರ್ನಾಟಕ [illegible]
ಅಸೋಸಿಯೇಷನ್.
ನಂ. 713/ಬಿ, 11ನೇ ಕ್ರಾಸ್, 5ನೇ ಮೈನ್,
ಆರ್. ಪಿ. ಸಿ. ಲೇಔಟ್, ವಿಜಯನಗರ,
ಬೆಂಗಳೂರು-560 040.
–

ಸಂಘವನ್ನು ನೋಂದಾಯಿಸಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ನೋಂದಣಿ ಶುಲ್ಕ ರೂಪಾಯಿ (ಅಂಕಿಗಳಲ್ಲಿ) ರೂ. 1,000/-

(ಅಕ್ಷರಗಳಲ್ಲಿ ಒಂದು ಸಾವಿರ – ಮಾತ್ರ) ಗಳನ್ನು ಪಾವತಿಸಲಾಗಿದೆ.

ಎರಡು ಸಾವಿರದ ಒಂಬತ್ತನೇ ಇಸವಿ ಜುಲೈ ತಿಂಗಳು 10ನೇ ದಿನಾಂಕದಂದು ನನ್ನ ಸಹಿ ಮತ್ತು ಮುದ್ರೆಯೊಂದಿಗೆ ನೀಡಲ್ಪಟ್ಟಿದೆ.

ಸಂಘಗಳ ನೋಂದಣಾಧಿಕಾರಿಗಳು
ಸಂಘಗಳ ನೋಂದಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು
ಬೆಂಗಳೂರು ನಗರ ಜಿಲ್ಲೆ.

ಈ ದಸ್ತಾವೇಜು 17 ಪುಟಗಳನ್ನು ಒಳಗೊಂಡಿರುತ್ತದೆ.
ದಸ್ತಾವೇಜು ಸಂಖ್ಯೆ 372/09-10 ಆಗಿರುತ್ತದೆ.

ಜಿ.ನೋ.ಅ.

ರವರಿಗೆ,

ಸಂಘಗಳ ನೋಂದಣಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ,
ನಂ.1, ಅಲಿ ಅಸ್ಕರ್ ರೋಡ್,
ಬೆಂಗಳೂರು.

ಚಲನ್ ನಂ: 159 ರೂ 1000=00
ದಿನಾಂಕ: 08-07-09
ಸ್ಕ್ಯಾನಿಂಗ್ ಶುಲ್ಕ ರೂ: 600=00
ರಸೀದಿ ಸಂಖ್ಯೆ: 012531
ದಿನಾಂಕ: 08-07-09

ವಿ.ನಿ.

ಮಾನ್ಯರೇ,

ವಿಷಯ: ಸಂಘವನ್ನು ನೋಂದಣಿ ಮಾಡುವ ಬಗ್ಗೆ.

ನಾವು ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯನ್ವಯ 1960ರ ಮೇರೆಗೆ ಸಂಘವನ್ನು ನೋಂದಾಯಿಸಲು ಸಂಘದ ನಿವೇದನಾ ಪತ್ರಿಕೆ ಮತ್ತು ನಿಬಂಧನೆಗಳನ್ನು ಸಲ್ಲಿಸಿ ಹಾಗೂ ಅದಕ್ಕೆ ತಗಲುವ ನೋಂದಣಿ ಶುಲ್ಕವನ್ನು ತಮ್ಮ ಕಛೇರಿಯಲ್ಲಿ ಜಮಾ ಮಾಡಿ ನಮ್ಮ ಸಂಘವನ್ನು ನೋಂದಣಿ ಮಾಡಿ ಕೊಡಿ ಎಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು,

1. Dr A. MOHAN.
2. Dr. MANOHAR MAMANI
3. Dr. KESHAVAMURTHY. R
4. Dr. ARUN CHAWLA
5. Dr. MANJUNATH SHETTY
6. Dr. SIDDALINGESHAR NEELI
7. Dr. SRIDHAR REDDY. V. Sridhar Reddy

# ಕರ್ನಾಟಕ ಯುರೋಲಜಿ ಅಸೋಸಿಯೇಷನ್

(Karnataka Urology Association)

ನಂ.713/ಬಿ, 11ನೇ ಕ್ರಾಸ್, 5ನೇ ಮೈನ್, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು-560 040.

---

## ಸಭೆಯ ನಡವಳಿಕೆಗಳು

ವಿಷಯ: ಸಂಘವನ್ನು ನೋಂದಾಯಿಸುವ ಬಗ್ಗೆ.

ದಿನಾಂಕ: 05.09.2008 ರಂದು ಸಂಘದ ಸದಸ್ಯರುಗಳು ಸಭೆ ಸೇರಿ ಆಡಳಿತ ಮಂಡಳಿಯ ಸದಸ್ಯರನ್ನು ಸರ್ವಾನುಮತದಿಂದ ಚುನಾಯಿಸಲಾಯಿತು ಮತ್ತು ಕರ್ನಾಟಕ ಯುರಾಲಜಿ ಅಸೋಸಿಯೇಷನ್ ಎಂಬ ಸಂಘವನ್ನು ಕರ್ನಾಟಕ ಸಂಘಗಳ ವಿಧಿಗಳನ್ವಯ ತಯಾರಿಸಿ ಒಪ್ಪಿಸಲಾಯಿತು ಮತ್ತು ಸಂಘಗಳ ನೋದಣಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಮಾಡಲು ಸಂಘದ ಪ್ರಧಾನ ಕಾರ್ಯದರ್ಶಿಯವರಿಗೆ ಅಧಿಕಾರವನ್ನು ನೀಡಲಾಯಿತು. ಈ ಸಂಘವನ್ನು ಕರ್ನಾಟಕ ಸಂಘಗಳ ವಿಧಿಗಳನ್ವಯ ನೋಂದಣಿ ಕಚೇರಿಯಲ್ಲಿ ನೋಂದಾಯಿಸಬೇಕೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ತತ್ಸಂಬಂಧವಾಗಿ ಸಂಘದ ಧ್ಯೇಯೋದ್ದೇಶಗಳನ್ನು ಮತ್ತು ನಿಬಂಧನೆಗಳನ್ನು ತಯಾರಿಸಿ ಒಪ್ಪಿಸಲಾಯಿತು.

1. [signature]
2. [signature]
3. [signature]
4. [signature]
5. [signature]
6. y [signature]
7. V. Sreedhar Reddy

ದಸ್ತಾವೇಜು ಸಂಖ್ಯೆ

# ಕರ್ನಾಟಕ ಯುರೋಲಜಿ ಅಸೋಸಿಯೇಷನ್

(Karnataka Urology Association)

ನಂ.713/ಬಿ, 11ನೇ ಕ್ರಾಸ್, 5ನೇ ಮೈನ್, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು-560 040.

## ಜ್ಞಾಪನಾ ಪತ್ರ

1. ಸಂಘದ ಉದ್ದೇಶಗಳು :-

ಎ. ಭಾರತದಲ್ಲಿ ಯುರೋಲಜಿ ವಿಜ್ಞಾನ ಕ್ಷೇತ್ರದ ಯಾವುದೇ ವಿಭಾಗದಲ್ಲಿಯಾದರೂ ತಜ್ಞರಂತೆಯಿಂದ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ನಡುವೆ ಸಂಬಂಧ ಮತ್ತು ಸಹಕಾರವನ್ನು ಸ್ಥಾಪಿಸುವುದು.

ಬಿ. ಯುರೋಲಜಿ ವಿಜ್ಞಾನ ವಲಯದ ಅಭ್ಯಾಸ ಮತ್ತು ಉಪಯುಕ್ತತೆಯಲ್ಲಿ ಅತ್ಯುತ್ತಮ ಗುಣಮಟ್ಟ ಮತ್ತು ಮೌಲಿಕತೆಯನ್ನು ಸಾಧಿಸುವುದು.

ಸಿ. ಯುರೋಲಜಿ ವಿಜ್ಞಾನ ವಲಯದ ಎಲ್ಲ ಕ್ಷೇತ್ರಗಳಲ್ಲಿಯೂ ಸಂಶೋಧನೆಯನ್ನು ಸಾಧ್ಯವಾಗಿಸುವುದು ಮತ್ತು ಸಂಶೋಧನೆಗೆ ಉತ್ತೇಜನ ನೀಡುವುದು.

ಡಿ. ಸಂಸ್ಥೆಯ ಸದಸ್ಯರುಗಳ ವೃತ್ತಿಪರ ನೈಪುಣ್ಯತೆ ಮತ್ತು ಜ್ಞಾನವನ್ನು ಮತ್ತಷ್ಟು ಹರಿತಗೊಳಿಸಲು ಸಾಧ್ಯವಾಗುವಂತೆ ವೈಜ್ಞಾನಿಕ ಸಮಾವೇಶಗಳನ್ನು ಸಂಘಟಿಸುವುದು.

2. ಸಂಘದಲ್ಲಿ ಉತ್ಪತ್ತಿಯಾಗುವ ಹಣವನ್ನು ಸಂಘದ ಅಭಿವೃದ್ಧಿಗಾಗಿ ಉಪಯೋಗಿಸುವುದು. ಯಾವುದೇ ಕಾರಣದಿಂದ ಆ ಹಣವನ್ನು ಸದಸ್ಯರಿಗೆ ಹಂಚಲಾಗುವುದಿಲ್ಲ.

3. ಈ ನಿವೇದನಾ ಪತ್ರಿಕೆ ಮತ್ತು ನಿಬಂಧನೆಗಳನ್ನು ಸಲ್ಲಿಸಲು ಹಾಗು ನೋಂದಣಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಸಂಘದ ಪ್ರಧಾನ ಕಾರ್ಯದರ್ಶಿಯವರಿಗೆ ಅಧಿಕಾರವನ್ನು ನೀಡಲಾಗಿದೆ.

1\. [signature]
2\. [signature]
3\. [signature]
4\. [signature]
5\. [signature]
6\. [signature]
7\. V. Sreedhar Reddy

ಸಂಘದ ಹೆಸರು: ಕರ್ನಾಟಕ ಯುರೋಲಜಿ ಅಸೋಸಿಯೇಷನ್
ದಾಖಲೆಗಳ ವಿವರ: ಜ್ಞಾಪನ ಪತ್ರ
ಸ್ವೀಕರಿಸಿದ ದಿನಾಂಕ: 08-07-09
ನೋಂದಣಿ ಸಂಖ್ಯೆ: 372/09-10
ರಿಜಿಸ್ಟರ್‌ನಲ್ಲಿನ ಕ್ರಮಸಂಖ್ಯೆ: 372/09-10
ವಿಲೇವಾರಿ ವಿವರ: [illegible] ನೋಂದಾಯಿಸಿದೆ
ದಿನಾಂಕ: 10-07-09

ಸಂಘಗಳ ನೋಂದಣಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲೆ.

# ಕರ್ನಾಟಕ ಯುರೋಲಜಿ ಅಸೋಸಿಯೇಷನ್

(Karnataka Urology Association)

ನಂ.713/ಬಿ, 11ನೇ ಕ್ರಾಸ್, 5ನೇ ಮೇನ್, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು-560 040.

## ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿ

ಪ್ರವರ್ತಕ/ ಪ್ರವರ್ತಕರು:-

| ಕ್ರ.ಸಂ. | ಹೆಸರು ಮತ್ತು ವಿಳಾಸ | ವಯಸ್ಸು | ಉದ್ಯೋಗ | ಪದವಿ | ಸಹಿ |
|---|---|---|---|---|---|
| 1. | ಡಾ|| ಎ. ಮೋಹನ್<br>ಶೋಭಾ ಸದನ, ನಂ. 26/17<br>ಎನ್ ಆರ್. ಕಾಲೋನಿ,<br>ಬೆಂಗಳೂರು-19 | 52 yrs | ವೈದ್ಯರು | ಅಧ್ಯಕ್ಷರು | [signature] |
| 2. | ಡಾ|| ಮನೋಹರ್ ಪಾಟೀಲ,<br>ಸ್ಪೆಷಾಲಿಟಿ ಕೇರ್ ಸೆಂಟರ್, 4ನೇ ಮೈನ್,<br>ರಾಮ್ & ಕೋಮಲಿ ಸರ್ಕಲ್,<br>ಪಿ.ಜೆ. ಎಕ್ಸ್‌ಟೆಂಷನ್, ದಾವಣಗೆರೆ. | 46 yrs | ವೈದ್ಯರು | ಉಪಾಧ್ಯಕ್ಷರು | [signature] |
| 3. | ಡಾ|| ಕೇಶವ ಮೂರ್ತಿ ಆರ್.<br>ನಂ. 713/ಬಿ, 11ನೇ ಕ್ರಾಸ್,<br>5ನೇ ಮೈನ್, ಎಂ.ಸಿ.ಲೇಔಟ್,<br>ವಿಜಯನಗರ, ಬೆಂಗಳೂರು-40 | 43 yrs | ವೈದ್ಯರು | ಪ್ರಧಾನ ಕಾರ್ಯದರ್ಶಿ | [signature] |
| 4. | ಡಾ|| ಅರುಣ್ ಚಾವ್ಲ,<br>ನಂ. 10/4, ಕೆ.ಎಂ.ಸಿ. ಕ್ವಾರ್ಟ್ರ್ಸ್,<br>ಮಣಿಪಾಲ್, ಕರ್ನಾಟಕ 576104. | 46 yrs | ವೈದ್ಯರು | ಖಜಾಂಚಿ | [signature] |
| 5. | ಡಾ|| ಮಂಜುನಾಥ ಶೆಟ್ಟಿ,<br>ನಂ.24-4-327-5,<br>ಉಮಾಮಹೇಶ್ವರಿ ದೇವಸ್ಥಾನ ಹಿಂಬದಿ ಪರಿಸರ,<br>ಅತ್ತಾವರ್, ಮಂಗಳೂರು,ದ.ಕ.575001. | 45 yrs | ವೈದ್ಯರು | ಸದಸ್ಯರು | [signature] |
| 6. | ಡಾ|| ಸಿದ್ದಲಿಂಗೇಶ್ವರ ನೀಲಿ,<br>ಫ್ಲಾಟ್ ನಂ.9, ಓಂ ನಗರ,<br>ವಿದ್ಯಾನಗರ, ಹುಬ್ಬಳ್ಳಿ,<br>ಧಾರವಾಡ 580 031. | 36 yrs | ವೈದ್ಯರು | ಸದಸ್ಯರು | [signature] |
| 7. | ಡಾ|| ಶ್ರೀಧರ್ ರೆಡ್ಡಿ<br>ನಂ. 13/3, ಕೆ.ಎಂ.ಸಿ. ಕ್ವಾರ್ಟ್ರ್ಸ್,<br>ಮಣಿಪಾಲ್, ಕರ್ನಾಟಕ 576104. | 42 yrs | ವೈದ್ಯರು | ಸದಸ್ಯರು | V. S[illegible] |

ಸಾಕ್ಷಿಗಳು:

| ಕ್ರ.ಸಂ. | ಹೆಸರು ಮತ್ತು ವಿಳಾಸ | ವಯಸ್ಸು | ಉದ್ಯೋಗ | ಸಹಿ |
|---|---|---|---|---|
| 1 | Dr. Chandrashekar S. Ratkal<br>Prof & Head of Department<br>Department of Urology<br>Institute of Nephro-Urology<br>Victoria Hospital Campus. Bangalore: 560002 | 54 yrs | Professor of Urology | [signature] 3/1/2005 |
| 2. | Dr. Chandrashekar. C.R.<br>Professor of Urology<br>Institute of Nephro-Urology<br>Victoria Hospital Campus, Bangalore: 560002 | 54 yrs | Professor of Urology | [signature] |

# ಕರ್ನಾಟಕ ಯುರೋಲಜಿ ಅಸೋಸಿಯೇಷನ್

(Karnataka Urology Association)

ನಂ.713/ಬಿ, 11ನೇ ಕ್ರಾಸ್, 5ನೇ ಮೈನ್, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು-560 040.


## ಸಂಘದ ನಿಯಮ ಮತ್ತು ನಿಬಂಧನೆಗಳು

ಈ ನಿಬಂಧನೆಗಳು ಸಂಘದ ನಿವೇದನಾ ಪತ್ರಿಕೆಯಲ್ಲಿ ನಮೂದಿಸಿರುವ ಉದ್ದೇಶಗಳನ್ನು ಈಡೇರಿಸುವ ಉದ್ದೇಶದಿಂದ ರಚಿಸಲ್ಪಟ್ಟಿರುತ್ತದೆ.

1. ಸಂಘದ ಸದಸ್ಯತ್ವ:-

1.1 ಸಂಘದ ಧ್ಯೇಯೋದ್ದೇಶಗಳನ್ನು ಅಂಗೀಕರಿಸಿ ಸಂಘದೊಡನೆ ಸಹಕರಿಸುವ ಎಲ್ಲಾ ಯುರಾಲಜಿಯಲ್ಲಿ ಅರ್ಹತೆ ಪಡೆದಿರುವ ಅಥವಾ ಯುರಾಲಜಿಯಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಓದುತ್ತಿರುವ ವೈದ್ಯರು ಸಂಘದ ಸದಸ್ಯತ್ವ ಪಡೆಯಲು ಅರ್ಹರಾಗಿರುತ್ತಾರೆ.

1.2. ಸಂಘದ ಸದಸ್ಯತ್ವ ವರ್ಗವು ಈ ಕೆಳಕಂಡ ವರ್ಗಗಳಿಂದ ಕೂಡಿರುತ್ತದೆ.

1. ಪೂರ್ಣ ಸದಸ್ಯರು
2. ಸಹ ಸದಸ್ಯರು
3. ಗೌರವ ಸದಸ್ಯರು

1.3. ಸಂಘದ ಸದಸ್ಯರಾಗಿ ಸೇರಬಯಸುವ ವ್ಯಕ್ತಿಯು ಸದಸ್ಯತ್ವಕ್ಕೆ ಅರ್ಜಿಯನ್ನು ಪ್ರವೇಶ ಧನ ಮತ್ತು ಚಂದಾ ಹಣದೊಡನೆ ಸಂಘಕ್ಕೆ ಸಲ್ಲಿಸಬೇಕು. ಗೌರವ ಕಾರ್ಯದರ್ಶಿ ಹಾಗೂ ಅಧ್ಯಕ್ಷರು ಸದರಿ ಅರ್ಜಿಯನ್ನು ಮುಂದಿನ ಕಾರ್ಯಕಾರಿ ಸಮಿತಿಯ ಪರಿಶೀಲನೆಗೆ ಹಾಗೂ ಸರ್ವ ಸದಸ್ಯರ ಸಭೆ ಅನುಮೋದನೆಗೆ ಒಳಪಟ್ಟು ಸ್ವೀಕರಿಸಲು ಅಧಿಕಾರ ಹೊಂದಿರುತ್ತಾರೆ. ಯಾವ ಕಾರಣದಿಂದಲೂ ಸದಸ್ಯತ್ವದ ಅರ್ಜಿಯನ್ನು ಒಪ್ಪಿಕೊಳ್ಳದಿದ್ದರೆ ಸದರಿ ಅರ್ಜಿದಾರರಿಗೆ 15 ದಿನದೊಳಗಾಗಿ ಕಾರಣಗಳ ಸಮೇತ ತಿಳಿಯಪಡಿಸತಕ್ಕದ್ದು.

1.4 ಪೂರ್ಣ ಸದಸ್ಯತ್ವ:

a. ಸಂಘದ ಸಂಸ್ಥಾಪಕ ಸದಸ್ಯರನ್ನು ಹೊರತುಪಡಿಸಿ ಮಿಕ್ಕೆಲ್ಲ ಸದಸ್ಯರೂ ಭಾರತೀಯ ವೈದ್ಯಕೀಯ ಮಂಡಳಿಯಿಂದ ಅಂಗೀಕೃತವಾದಂತೆ ಯುರೋಲಜಿಯಲ್ಲಿ ನಿರ್ದಿಷ್ಟ ವಿದ್ಯಾರ್ಹತೆಯನ್ನು ಹೊಂದಿರಬೇಕು.

b. ಉದ್ದೇಶಕ್ಕೆಂದು 1.1.2008 ರಂದು ಸಂಘದ ದಾಖಲೆಗಳಲ್ಲಿರುವ ಎಲ್ಲ ಸದಸ್ಯರನ್ನು ಪೂರ್ಣ ಸದಸ್ಯರೆಂದು ಪರಿಗಣಿಸಲಾಗುವುದು.

c. ಪೂರ್ಣ ಸದಸ್ಯತ್ವದ ಪ್ರಸ್ತಾವನೆಯನ್ನು ಈಗಾಗಲೇ ಪೂರ್ಣ ಸದಸ್ಯತ್ವ ಹೊಂದಿದ ಇಬ್ಬರು ಬೆಂಬಲಿಸಬೇಕು. ಕಾರ್ಯಕಾರಿ ಸಮಿತಿಯು ಇಂತಹ ಅರ್ಜಿ/ ಪ್ರಸ್ತಾವನೆಗಳನ್ನು ಪರಾಮರ್ಶಿಸಿ ಒಪ್ಪಿಗೆಗಾಗಿ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸುವುದು. ಇಂತಹ ವ್ಯಕ್ತಿಗಳ ವೈಜ್ಞಾನಿಕ ಪ್ರಾತಿನಿಧಿತ್ವವನ್ನು ಸರ್ವ ಸದಸ್ಯರ ಸಭೆ ಒಪ್ಪುವುದನ್ನು ಕಾರಣವಾಗಿಸಿ ಅನುಮತಿಸಲಾಗುವುದು.

d. ಎಂಸಿಹೆಚ್/ಡಿಎನ್‌ಬಿ ಯುರೋಲಜಿ ರೆಸಿಡೆಂಟ್‌ಗಳಾಗಿದ್ದು ಸಹ ಸದಸ್ಯರಾಗಿ ಸಂಘದಲ್ಲಿರುವವರು ತಮ್ಮ ಪದವಿ ಪರೀಕ್ಷೆಯನ್ನು ಮುಗಿಸಿದ ನಂತರ ಪದವಿ ಪ್ರಮಾಣ ಪತ್ರವನ್ನು ಹಾಜರುಪಡಿಸಿ, ನಿಗದಿತ ಚಂದಾವನ್ನು ತುಂಬಿದ ನಂತರ ಪೂರ್ಣ ಸದಸ್ಯರಾಗುವರು.

e. ಪೂರ್ಣ ಸದಸ್ಯರು ನಿಯಮಾವಳಿಗಳಂತೆ ಸಂಘದ ಹುದ್ದೆಗಳಿಗೆ ಸ್ಪರ್ಧಿಸುವ ಮತ್ತು ಮತ ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ.

1.5 ಸಹ ಸದಸ್ಯತ್ವ:

a. ಸಹ ಸದಸ್ಯತ್ವಕ್ಕೆ ಎಲ್ಲ M.Ch. / DNB ಯುರೋಲಜಿ ಸ್ನಾತಕೋತ್ತರ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಇಂತಹ ಸದಸ್ಯರು ತಮ್ಮ ಪದವಿ ಪರೀಕ್ಷೆಗಳನ್ನು ಮುಗಿಸಿ ಪದವಿ ಪಡೆದ ನಂತರ ನಿಯಮ 1.4 (d) ಪ್ರಕಾರ ಪೂರ್ಣ ಸದಸ್ಯರಾಗುತ್ತಾರೆ.

b. ಭಾರತೀಯ ವೈದ್ಯಮಂಡಳಿ ಮಾನ್ಯ ಮಾಡಿರುವ ಪದವಿ ಹೊಂದಿರುವ ಎಲ್ಲಾ ವೈದ್ಯಕೀಯ ವ್ಯಕ್ತಿ ನಿರತರು, ಯುರೋಲಜಿಯಲ್ಲಿ ಆಸಕ್ತಿಯುಳ್ಳವರಾಗಿದ್ದರೆ, ಅವರನ್ನೂ ಸಹ ಸದಸ್ಯತ್ವಕ್ಕೆ ಪರಿಗಣಿಸಲಾಗುವುದು.

c. ಸಹ ಸದಸ್ಯತ್ವಕ್ಕೆ ಪ್ರಸ್ತಾವನೆಯನ್ನು ಇಬ್ಬರು ಪೂರ್ಣ ಸದಸ್ಯರು ಅನುಮೋದಿಸಬೇಕು. ಕಾರ್ಯಕಾರಿ ಸಮಿತಿಯು ಇಂತಹ ಪ್ರಸ್ತಾವನೆಗಳನ್ನು ಪರಾಮರ್ಶಿಸಿ ಒಪ್ಪಿಗೆಗಾಗಿ ವಾರ್ಷಿಕ ಸರ್ವ ಸದಸ್ಯರ ಸಭೆಯ ಮುಂದಿರಿಸುವುದು.ಇಂತಹ ವ್ಯಕ್ತಿಗಳ ವೈಜ್ಞಾನಿಕ ಪ್ರಾತಿನಿಧಿತ್ವವನ್ನು ಸರ್ವ ಸದಸ್ಯರ ಸಭೆ ಒಪ್ಪುವುದೆಂಬ ಕಾರಣ ಕಾಗಿ ಅನುಮತಿಸಲಾಗುವುದು.

1.6. ಗೌರವ ಸದಸ್ಯತ್ವ

a. ಯುರೋಲಜಿಕಲ್ ವಿಜ್ಞಾನದ ಅಭಿವೃದ್ಧಿಗಾಗಿ ಗಣನೀಯ ಕಾಣಿಕೆ ನೀಡಿರುವಂತಹ ಯಾವುದೇ ಹಿರಿಯ ಮತ್ತು ವಿಶಿಷ್ಟ ವ್ಯಕ್ತಿಗಳಿಗಾಗಿ ಮಾತ್ರ ಗೌರವ ಸದಸ್ಯತ್ವವನ್ನು ಮಿತಿಗೊಳಿಸಲಾಗುವುದು.

b. ಗೌರವ ಸದಸ್ಯತ್ವದ ಪ್ರಸ್ತಾವನೆಯನ್ನು ಇಬ್ಬರು ಪೂರ್ಣ ಸದಸ್ಯರು ಅನುಮೋದಿಸಬೇಕು. ಕಾರ್ಯಕಾರಿ ಸಮಿತಿಯು ಇಂತಹ ಪ್ರಸ್ತಾವನೆಯನ್ನು ಪರಾಮರ್ಶಿಸಿ ಒಪ್ಪಿಗೆ ನೀಡಲು ವಾರ್ಷಿಕ ಸರ್ವ ಸದಸ್ಯರ ಸಭೆಗೆ ಶಿಫಾರಸ್ಸು ಮಾಡುತ್ತದೆ. ಯಾವುದೇ ಸಂದರ್ಭದಲ್ಲಿಯೂ ಗೌರವ ಸದಸ್ಯರ ಒಟ್ಟು ಸಂಖ್ಯೆ ಸಂಘದ ಒಟ್ಟಾರೆ ಸದಸ್ಯರ ಸಂಖ್ಯೆಯ ಶೇ. ಎರಡರಷ್ಟನ್ನು ಮೀರುವಂತಿಲ್ಲ.

ದಸ್ತಾವೇಜು ಸಂಖ್ಯೆ 572/09-10 ರ ಪುಟಸಂಖ್ಯೆ 7

c. ಸಂಘದ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸುವ ಮತ್ತು ಮತ ಚಲಾಯಿಸುವ ಹಕ್ಕು/ ಅವಕಾಶಗಳನ್ನು ಬಿಟ್ಟು ಮಿಕ್ಕೆಲ್ಲ ಪ್ರಯೋಜನಗಳಿಗೂ ಗೌರವ ಸದಸ್ಯರು ಭಾಜನರಾಗುವರು. ಅವರಿಗೆ ಯಾವುದೇ ರೀತಿಯ ಚಂದಾ ನೀಡುವಿಕೆಯಿಂದ ವಿನಾಯ್ತಿಯಿದೆ. (ಅಥವಾ ಅವರು ಯಾವುದೇ ರೀತಿಯ ಚಂದಾ ನೀಡುವ ಅವಶ್ಯಕತೆಯಿಲ್ಲ)

2. <u>ಪ್ರವೇಶ ಪತ್ರ</u>:-

ಸದಸ್ಯರಾಗಿ ಸೇರಲು ಇಚ್ಛಿಸುವವರು ಪ್ರವೇಶ ಪತ್ರವನ್ನು ಭರ್ತಿ ಮಾಡಿ ಆಯಾ ವರ್ಗಕ್ಕೆ ಗೊತ್ತು ಮಾಡಿರುವ ಚಂದಾ ಮತ್ತು ಪ್ರವೇಶ ಧನದೊಂದಿಗೆ ಸಲ್ಲಿಸತಕ್ಕದ್ದು.

3. <u>ಸದಸ್ಯರ ಹಕ್ಕು ಬಾಧ್ಯತೆಗಳು</u>:-

ಸಂಘದ ಸದಸ್ಯತ್ವ ಅಂಗೀಕಾರವಾದ ದಿನದಿಂದ ಸಂಘವು ಕೈಗೊಳ್ಳುವ ಎಲ್ಲಾ ಕಾರ್ಯಕ್ರಮಗಳಿಗೆ ಎಲ್ಲಾ ಸದಸ್ಯರಿಗೂ ಪ್ರವೇಶವಿರುತ್ತದೆ. ಸಂಘದ ಎಲ್ಲಾ ವರ್ಗದ ಸದಸ್ಯರಿಗೆ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸುವ ಅಧಿಕಾರ ಇರುತ್ತದೆ. ಸಂಘದ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳ ಹುದ್ದೆಗೆ ಸ್ಪರ್ಧಿಸಲು ಸಂಘದ ಪೂರ್ಣ ಸದಸ್ಯರಿಗೆ ಅಧಿಕಾರವಿರುತ್ತದೆ.

4. ಯಾವುದೇ ಸದಸ್ಯರು ಸಂಘದ ಹಿತಕ್ಕೆ ವಿರೋಧವಾಗಿ ವರ್ತಿಸುತ್ತಾರೆ ಎಂದು ಕಂಡುಬಂದಲ್ಲಿ, ಅವರಿಗೆ ಕನಿಷ್ಠ ಪಕ್ಷ 7 ದಿನಗಳ ಅವಧಿಯ ನೋಟೀಸ್ ಕೊಟ್ಟು ಅವರ ಹೇಳಿಕೆ ಪಡೆದ ನಂತರ ಕಾರ್ಯಕಾರಿ ಸಮಿತಿ ಅವರ ಸದಸ್ಯತ್ವವನ್ನು ಅಮಾನತ್ತಿನಲ್ಲಿ ಇಡುವ ಅಧಿಕಾರವಿರುತ್ತದೆ. ಇದನ್ನು ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಿ ಮಂಜೂರಾತಿ ಪಡೆಯತಕ್ಕದ್ದು

5. ಸಂಘದ ಸಾಮಾನ್ಯ ಸದಸ್ಯರ ಅವಧಿ ಏಪ್ರಿಲ್ ತಿಂಗಳಿಂದ ಮಾರ್ಚ್ ತಿಂಗಳ ಅಂತ್ಯದವರೆಗೆ ಇರುವುದು. ವರ್ಷದ ನಡುವೆ ಯಾವಾಗ ಸದಸ್ಯರಾದರೂ ಸಹ ಆ ಸದಸ್ಯತ್ವವೂ ಆ ವರ್ಷಕ್ಕೆ ಸೇರುತ್ತದೆ.

6. ಸದಸ್ಯತ್ವ ನಿಂತು ಹೋಗುವುದು.

ಯಾವುದೇ ಸದಸ್ಯರು ಮರಣ ಹೊಂದಿದರೆ, ಬುದ್ಧಿ ಭ್ರಮಣೆಯಾದರೆ, ಸದಸ್ಯತ್ವದಿಂದ ವಜಾ ಮಾಡಲ್ಪಟ್ಟರೆ, ರಾಜೀನಾಮೆ ಕೊಟ್ಟರೆ, ಕಾನೂನು ಪ್ರಕಾರ ಅನರ್ಹ ವ್ಯಕ್ತಿಯೆಂದು ಘೋಷಿಸಲ್ಪಟ್ಟಲ್ಲಿ, ಸಂಘದ ಉದ್ದೇಶಗಳಿಗೆ ವಿರುದ್ಧವಾಗಿ ವರ್ತಿಸುತ್ತಿರುವುದು ಕಂಡುಬಂದರೆ ಅಂತಹವರ ಸದಸ್ಯತ್ವವನ್ನು ಸಂಘದಿಂದ ರದ್ದು ಮಾಡಲಾಗುವುದು.

7. ಸದಸ್ಯರ ಪುಸ್ತಕ

ಸಂಘದಲ್ಲಿ ಸದಸ್ಯರ ಪುಸ್ತಕವನ್ನು ಇಡತಕ್ಕದ್ದು. ಅದರಲ್ಲಿ ಸದಸ್ಯರ ಹೆಸರು, ವಿಳಾಸ ವಯಸ್ಸು, ಉದ್ಯೋಗ ಮೊದಲಾದ ವಿವರಗಳನ್ನು ನಮೂದಿಸತಕ್ಕದ್ದು. ಖಾತೆ ಪುಸ್ತಕ, ಆಸ್ತಿ ಮತ್ತು ಷೇರುಗಳ ಪುಸ್ತಕಗಳನ್ನು ಕೂಡ ಇಡತಕ್ಕದ್ದು.

8. ಕಾರ್ಯಕಾರಿ ಸಮಿತಿ ಪದಾಧಿಕಾರಿಗಳ ಆಯ್ಕೆ

8.1 ಸಂಘದ ಆಡಳಿತವನ್ನು ಈ ಮುಂದಿನಂತೆ ರಚಿತವಾದ ಕಾರ್ಯಕಾರಿ ಸಮಿತಿಯು ನಡೆಸತಕ್ಕದ್ದು. ಅಧ್ಯಕ್ಷರು/ಉಪಾಧ್ಯಕ್ಷರು/ಗೌರವ ಕಾರ್ಯದರ್ಶಿ/ಖಜಾಂಚಿ ಸಂಘದ ಪ್ರತಿನಿಧಿಯಾಗಿ ಕಾರ್ಯವನ್ನು ನಿರ್ವಹಿಸುವುದು.

8.2. ಕಾರ್ಯಕಾರಿ ಸಮಿತಿಯ ಸದಸ್ಯರನ್ನು ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಕೈ ಎತ್ತುವುದರ ಮೂಲಕ ಅಥವಾ ಗುಪ್ತ ಮತದಾನದ ಮೂಲಕ ಆರಿಸಲಾಗುವುದು.

8.3. ಕಾರ್ಯಕಾರಿ ಸಮಿತಿ

ಒಂದು ವರ್ಷಕ್ಕೊಮ್ಮೆ ಸರ್ವ ಸದಸ್ಯರ ಸಭೆಯಲ್ಲಿ ಒಟ್ಟು 7 ಜನ ಕಾರ್ಯಕಾರಿ ಸದಸ್ಯರನ್ನು ಸರ್ವ ಸದಸ್ಯರ ಸಭೆಯಲ್ಲಿ ಆರಿಸುವುದು. ಈ ಚುನಾಯಿತ ಸಭೆಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಗೌರವ ಕಾರ್ಯದರ್ಶಿ, ಖಜಾಂಚಿ ಆರಿಸಿ, ಉಳಿದವರು ಸಾಮಾನ್ಯ ಸದಸ್ಯರಾಗಿ ಕಾರ್ಯನಿರ್ವಹಿಸುವರು.

8.4. ಕಾರ್ಯಕಾರಿ ಸಮಿತಿಯಲ್ಲಿ ಯಾವುದೇ ಸ್ಥಾನ ತೆರವಾದರೆ ಆ ಸ್ಥಾನಕ್ಕೆ ಸದಸ್ಯರಲ್ಲಿ ಬೇರೆ ಯಾರನ್ನಾದರೂ ಸದಸ್ಯರ ಬಹುಮತ ನಿರ್ಣಯದ ಮೇರೆಗೆ ನೇಮಿಸಿಕೊಳ್ಳಬಹುದು.

8.5 ಕಾರ್ಯಕಾರಿ ಸಮಿತಿಯು ಕನಿಷ್ಠ 3 ತಿಂಗಳಿಗೊಮ್ಮೆ ಸಭೆ ಸೇರುವುದು. ಸಭೆ ಕುರಿತು ತಿಳುವಳಿಕೆ ಪತ್ರಗಳನ್ನು 7 ದಿನಗಳಿಗೆ ಕಡಿಮೆ ಇಲ್ಲದಂತೆ ಮುಂಚಿತವಾಗಿ ಸದಸ್ಯರಿಗೆ ಕಳುಹಿಸತಕ್ಕದ್ದು.

8.6. ಜರೂರು ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿಯು ಸಭೆ ಸೇರುವ ಸಮಯವನ್ನು ಎಷ್ಟೇ ಮುಂಚಿತವಾಗಿ ಸದಸ್ಯರಿಗೆ ತಿಳಿಯಪಡಿಸಬೇಕೆಂದು ಕಾಲ ವ್ಯವದಾನದ ನಿರ್ಬಂಧವಿಲ್ಲ. ಸಮಿತಿಗೆ ಆ ಸಂದರ್ಭವನ್ನು ನಿರ್ಧರಿಸುವ ಅಧಿಕಾರ ಇರುವುದು.

8.7. ಕಾರ್ಯಕಾರಿ ಸಮಿತಿ ಸಂಘದ ಉದ್ದೇಶಗಳ ಈಡೇರಿಕೆಗಾಗಿ ಸದಸ್ಯರಿಂದ, ದಾನಿಗಳಿಂದ, ಹಣಕಾಸು, ಖಾಸಗಿ, ಸರ್ಕಾರಿ, ಸರ್ಕಾರೇತರ ಸಂಸ್ಥೆಗಳಿಂದ,ಬ್ಯಾಂಕುಗಳಿಂದ ನೆರವು, ಧನ ಸಹಾಯ, ಕೊಡುಗೆ, ಸಾಲ, ಅನುದಾನ ಇತ್ಯಾದಿಗಳನ್ನು ಸ್ವೀಕರಿಸುವ ಅಧಿಕಾರ ಇರುವುದು.

8.8. ನಿವೇದನಾ ಪತ್ರಿಕೆಯಲ್ಲಿ ಸಹಿ ಮಾಡಿರುವ ಸದಸ್ಯರುಗಳು ಕಾರ್ಯಕಾರಿ ಸಮಿತಿಯ ಪ್ರಥಮ ಸದಸ್ಯರಾಗಿರುತ್ತಾರೆ. ಮುಂದಿನ ವರ್ಷಕ್ಕೆ ಸದಸ್ಯರು ಆರಿಸಲ್ಪಡುವವರೆವಿಗೂ ಅವರು ಮುಂದುವರೆಯುತ್ತಾರೆ.

8.9. ಯಾವುದೇ ಸದಸ್ಯರು ಸಂಘದ ಕಾರ್ಯಕಾರಿ ಸಮಿತಿಯ ಚುನಾವಣೆಯಲ್ಲಿ ಸ್ಪರ್ಧಿಸಬೇಕಾದಲ್ಲಿ ಸತತವಾಗಿ 3 ವರ್ಷಗಳ ಕಾಲ ಸಂಘದ ಪೂರ್ಣ ಸದಸ್ಯರಾಗಿರಬೇಕು.

8.10. ಕಾರ್ಯಕಾರಿ ಸಮಿತಿ ಆಡಳಿತಾವಧಿಯ ಕೊನೆಯ ಮೂರು ತಿಂಗಳಲ್ಲಿ ಯಾವುದೇ ವಿಧವಾದ ಹೊಸ ಸದಸ್ಯತ್ವವನ್ನು ನೀಡತಕ್ಕದ್ದಲ್ಲ.

8.11. ಅವಶ್ಯಕತೆ ಕಂಡಾಗ ಕಾರ್ಯಕಾರಿ ಸಮಿತಿ ಸಂಘದ ವಿವಿಧ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುವುದಕ್ಕಾಗಿ ತಮ್ಮಲ್ಲಿಯೇ ಆಗಲಿ ಅಥವಾ ಇತರ ಸದಸ್ಯರಿಂದಲೇ ಆಗಲಿ ಕೂಡಿದ ಉಪ ಸಮಿತಿಗಳನ್ನು ರಚಿಸಬಹುದು.

8.12. ಸಂಘದ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸುವ ಉದ್ದೇಶದಿಂದ ಕರ್ನಾಟಕದಾದ್ಯಂತ ಸಂಘದ ಶಾಖೆ/ ಘಟಕ ಕಛೇರಿಗಳನ್ನು ಹೊಂದಬಹುದಾಗಿರುತ್ತದೆ.

## 9. ಅವಶ್ಯಕ ಸಂಖ್ಯೆ:-

9.1. ಕಾರ್ಯಕಾರಿ ಸಮಿತಿ ಸಭೆಗೆ ಕಾರ್ಯ ನಿರ್ವಹಣಾಧಿಕಾರ ಇರುವುದಕ್ಕೆ ಒಟ್ಟು 1/3ರಷ್ಟು ಸದಸ್ಯರಾದರೂ ಹಾಜರಿರಬೇಕು. ಅವಶ್ಯ ಸಂಖ್ಯೆಯಷ್ಟು ಸದಸ್ಯರು ಹಾಜರಾಗದಿದ್ದರೆ ಆ ಸಭೆಯನ್ನು ಮುಂದೂಡಬೇಕು. ಈ ಮುಂದೂಡಿದ ಸಭೆ, ಅವಶ್ಯ ಸಂಖ್ಯೆಯಷ್ಟು ಸದಸ್ಯರು ಹಾಜರಾತಿ ಇರಲಿ ಇಲ್ಲದಿರಲಿ, ಹಿಂದಿನ ಸಭೆಗೆ ಗೊತ್ತಾಗಿದ್ದ ಕಾರ್ಯ ವಿವರಗಳನ್ನು ಪರ್ಯಾಲೋಚಿಸಿ ತೀರ್ಮಾನಗಳನ್ನು ಕೈಗೊಳ್ಳಲು ಅಧಿಕಾರ ಇರುತ್ತದೆ.

9.2. ಕಾರ್ಯಕಾರಿ ಸಮಿತಿಯ ಯಾವ ಒಬ್ಬ ಸದಸ್ಯರೂ ಅಧ್ಯಕ್ಷರ ಗಮನಕ್ಕೆ ತರದೇ ಸತತವಾಗಿ ಎರಡು ಸಭೆಗಳಿಗೆ ಗೈರು ಹಾಜರಾದಲ್ಲಿ ಅಂತಹವರನ್ನು ಕಾರ್ಯಕಾರಿ ಸಮಿತಿಯ ಸದಸ್ಯತ್ವದಿಂದ ತೆಗೆಯಬಹುದು ಮತ್ತು ತೆರವಾದ ಸ್ಥಾನಕ್ಕೆ ನಿಬಂಧನೆ 8.4 ಪ್ರಕಾರ ನೇಮಿಸಿಕೊಳ್ಳಬಹುದು.

## 10. ಲೆಕ್ಕ ಪತ್ರಗಳು ಮತ್ತು ಹಣಕಾಸು(ಆಡಳಿತ) ವರ್ಷ:-

10.1. ಸಂಘದ ಆಡಳಿತ ಮತ್ತು ಹಣಕಾಸು ವರ್ಷವು ಏಪ್ರಿಲ್ 1 ರಿಂದ ಮಾರ್ಚ್ 31ಕ್ಕೆ ಇರುತ್ತದೆ.

10.2. ಕಾರ್ಯಕಾರಿ ಸಮಿತಿಯು ಒಬ್ಬ ಲೆಕ್ಕ ತಪಾಸಣಾ ಅಧಿಕಾರಿಯನ್ನು ನೇಮಿಸುವುದು. ಅಂತಹವರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿರಬಾರದು.

10.3. ಲೆಕ್ಕ ಪತ್ರಗಳನ್ನು ಲೆಕ್ಕತಪಾಸಣಾಧಿಕಾರಿಯನ್ನು ನೇಮಕ ಮಾಡಿ ಸಂಘದ ಆಸ್ತಿ ಮತ್ತು ಜವಾಬ್ದಾರಿ ಪಟ್ಟಿಗಳನ್ನು ಪರಿಶೀಲಿಸಿ ಲೆಕ್ಕ ಪತ್ರಗಳನ್ನು ತಯಾರಿಸುವುದು ಮತ್ತು ಅದನ್ನು ವಾರ್ಷಿಕ ಸಭೆಗೆ ಒಪ್ಪಿಸುವುದು.

10.4. ಸಂಘದ ಲೆಕ್ಕ ಪತ್ರಗಳ ಬಗ್ಗೆ ವಿವರಣೆಯೇನಾದರೂ ಬೇಕಾದಲ್ಲಿ ಸದಸ್ಯರಲ್ಲಿ ಯಾರೇ ಆಗಲಿ ಅಧ್ಯಕ್ಷರು ಅಥವಾ ಗೌರವ ಕಾರ್ಯದರ್ಶಿಯವರ ಮೂಲಕ ಪಡೆಯಬಹುದು.

10.5. ಸಂಘದ ಹೆಸರಿನಲ್ಲಿ ಯಾವುದಾದರೊಂದು ಒಂದು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಖಾತೆಯನ್ನು ತೆರೆದು ಆ ಖಾತೆಯಲ್ಲಿ ಸಂಘದ ಹಣವನ್ನು ಜಮಾ ಮಾಡಿ ಸಂಘದ ಕಾರ್ಯಕ್ರಮಗಳಿಗೆ ಹಣ ಬೇಕಾದಾಗ ಸಂಘದ ಗೌರವ ಕಾರ್ಯದರ್ಶಿ ಮತ್ತು ಖಜಾಂಚಿಯವರ ಜಂಟಿ ಸಹಿಯೊಡನೆ ಹಣವನ್ನು ಪಡೆಯಬಹುದು.

11. ನಿಬಂಧನೆಗಳ ತಿದ್ದುಪಡಿ:-

ನಿಬಂಧನೆಗಳು ಅಥವಾ ಉಪನಿಬಂಧನೆಗಳನ್ನು ರಚಿಸುವ ಅಥವಾ ಬದಲಾಯಿಸುವ ಅಧಿಕಾರವು ಸರ್ವ ಸದಸ್ಯರ ಸಭೆಗೆ ಇರುವುದು. ಆದರೆ ಅಂತಹ ತಿದ್ದುಪಡಿಯನ್ನು ಮಂಡಿಸಿದಾಗ ಹಾಜರಿರುವ ಸದಸ್ಯರ ಕನಿಷ್ಠ 2/3 ಭಾಗದಷ್ಟು ಸದಸ್ಯರ ಒಪ್ಪಿಗೆಯ ನಂತರವೇ ಮಾಡಬಹುದು ಮತ್ತು ಸಂಘದ ನೋಂದಣಾಧಿಕಾರಿ ಒಪ್ಪಿಗೆಯ ನಂತರ ಅಳವಡಿಸಿಕೊಳ್ಳಬಹುದು.

12. ಕಾರ್ಯಾವಧಿ:-

ಸಂಘದ ಕಾರ್ಯಾವಧಿಯು ಬೆಳಗ್ಗೆ 10.00 ರಿಂದ ರಾತ್ರಿ 7.00 ಗಂಟೆಯವರೆಗೆ ಇರುತ್ತದೆ.

13. ಸದಸ್ಯರ ಸೂಚನೆಗೆ ಕಾಲಮಿತಿ:-

13.1. ಸಂಘದ ಕಾರ್ಯಕಲಾಪಗಳ ಬಗ್ಗೆ ಸೂಚನೆಗಳನ್ನು ಮತ್ತು ಸಂವಿಧಾನದ ಬಗ್ಗೆ ತಿದ್ದುಪಡಿಗಳನ್ನು ಸೂಚಿಸುವ ಸದಸ್ಯರು ವಾರ್ಷಿಕ ಸಭೆ ಗೊತ್ತಾಗಿರುವ ದಿವಸಕ್ಕೆ ಕನಿಷ್ಠ ಪಕ್ಷ 15 ದಿನಗಳ ಮೊದಲು ನೋಟಿಸನ್ನು ಸಂಘದ ಕಾರ್ಯಾಲಯಕ್ಕೆ ಕಳುಹಿಸತಕ್ಕದ್ದು.

13.2. ಕಾರ್ಯಕಾರಿ ಸಮಿತಿಯು ಮುಂದಿನ ವರ್ಷದ ಆಯ-ವ್ಯಯ ಅಂದಾಜು ಪಟ್ಟಿ ಹಾಗೂ ಕಾರ್ಯಸೂಚಿಯನ್ನು ತಯಾರಿಸುವುದು.

13.3. ನಿಬಂಧನೆಯ 8.2 ಪ್ರಕಾರ ವಾರ್ಷಿಕ ಸಭೆಯಲ್ಲಿ ಚುನಾಯಿಸಿದ ಮತಗಳನ್ನು ಎಣಿಸಿ ಫಲಿತಾಂಶಗಳನ್ನು ಪ್ರಕಟಿಸತಕ್ಕದ್ದು.

14. ಸರ್ವ ಸದಸ್ಯರ ಸಭೆ ನಿರ್ದಿಷ್ಟ ಸಂಖ್ಯೆ:-

ಪ್ರತಿಯೊಂದು ಸರ್ವ ಸದಸ್ಯರ ಸಭೆಯಲ್ಲಿ ಕನಿಷ್ಠ 1/3 ಭಾಗದಷ್ಟು ಸದಸ್ಯರು ಹಾಜರಿರಬೇಕು. ಯಾವ ಸಭೆಯಲ್ಲಿಯೇ ಆಗಲಿ ಕ್ಲುಪ್ತ ಕಾಲದ ನಂತರ ಅರ್ಧ ಗಂಟೆಯೊಳಗಾಗಿ ಈ ಅವಶ್ಯ ಸಂಖ್ಯೆಯಷ್ಟು ಸದಸ್ಯರು ಹಾಜರಾಗದಿದ್ದರೆ ಆ ಸಭೆಯನ್ನು ಮುಂದಕ್ಕೆ ಹಾಕತಕ್ಕದ್ದು. ಮುಂದಕ್ಕೆ ಹಾಕಿದ ಸಭೆಯ ದಿನ, ಕಾಲ, ವೇಳೆ ಇವುಗಳನ್ನು ಅಧ್ಯಕ್ಷರು ನಿಶ್ಚಯಿಸಿದ ತಕ್ಷಣವೇ ತಿಳಿಸತಕ್ಕದ್ದು. ಈ ರೀತಿ ಮುಂದುವರೆದ ಸಭೆಯಲ್ಲಿ ಅವಶ್ಯಕವಾದ ಕೋರಂ ಇಲ್ಲದೇ ಇದ್ದರೂ ಸಭೆಯನ್ನು ನಡೆಸತಕ್ಕದ್ದು. ಮುಂದಿನ ಸಭೆಯಲ್ಲಿ ಹೊಸ ವಿಷಯ ಯಾವುದನ್ನು ಚರ್ಚೆಗೆ ತರತಕ್ಕದ್ದಲ್ಲ.

15. ಸರ್ವ ಸದಸ್ಯರ ಸಭೆ:-

15.1. ಸರ್ವ ಸದಸ್ಯರ ಸಭೆಯನ್ನು ಹಣಕಾಸು ವರ್ಷದ ಅವಧಿ ಮುಗಿದ 3 ತಿಂಗಳೊಳಗಾಗಿ ಅಂದರೆ ಪ್ರತಿ ವರ್ಷ ಜೂನ್ ತಿಂಗಳೊಳಗಾಗಿ ನಡೆಸತಕ್ಕದ್ದು. ಸದಸ್ಯರಿಗೆಲ್ಲಾ ತಿಳುವಳಿಕೆ ಪತ್ರಗಳನ್ನು ಸಭೆ ಸೇರುವುದಕ್ಕೆ 21 ದಿವಸ ಮುಂಚಿತವಾಗಿ ಕಳುಹಿಸತಕ್ಕದ್ದು.

15.2 ಚಾರ್ಟರ್ಡ್ ಅಕೌಂಟೆಂಟರಿಂದ ತಯಾರು ಮಾಡಿರುವ ಹಿಂದಿನ ವರ್ಷದ ಆದಾಯ ವೆಚ್ಚ ಪಟ್ಟಿಯನ್ನು ಸಭೆ ಚರ್ಚಿಸಿ ಅನುಮೋದಿಸುವುದು. ಸಂಘವು ಆ ವರ್ಷದಲ್ಲಿ ಸಾಧಿಸಿರುವ ಪ್ರಗತಿಯನ್ನು ಅವಲೋಕಿಸುವುದು.

15.3. ಎರಡು ವರ್ಷಕ್ಕೊಮ್ಮೆ ಸರ್ವ ಸದಸ್ಯರ ಸಭೆಯಲ್ಲಿ 7 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆರಿಸುವುದು. ಮುಂದಿನ ವರ್ಷದ ಆಯ-ವ್ಯಯದ ಪಟ್ಟಿಯನ್ನು ಮಂಡಿಸುವುದು.

16. ಸದಸ್ಯರು ಮತ ಚಲಾಯಿಸುವ ಮತ್ತು ಅಭ್ಯರ್ಥಿಯಾಗುವ ಅಧಿಕಾರ:-

ಸರ್ವ ಸದಸ್ಯರ ಸಭೆಯಲ್ಲಿ ಮತ್ತು ಕಾರ್ಯಕಾರಿ ಸಮಿತಿಯ ಚುನಾವಣೆಯಲ್ಲಿ ಭಾಗವಹಿಸುವ ಅಧಿಕಾರವು ತಮ್ಮ ಚಂದಾ ಹಣವನ್ನು ಪೂರ್ತಿಯಾಗಿ ಸಲ್ಲಿಸಿ ಮತದಾರರ ಪಟ್ಟಿಯಲ್ಲಿ ಹೆಸರುಳ್ಳ ಸದಸ್ಯರಿಗೆ ಮಾತ್ರ ಇರತಕ್ಕದ್ದು.

17. ಎಲ್ಲಾ ತೀರ್ಮಾನಗಳು ಸಭೆಯಲ್ಲಿರುವ ಸದಸ್ಯರ ಬಹುಮತ ನಿರ್ಣಯದ ಮೇರೆಗೆ ಆಗತಕ್ಕದ್ದು. ಆದರೆ ಸಂವಿಧಾನದ ತಿದ್ದುಪಡಿಗಳನ್ನು ಮಾಡುವ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿದ್ದವರಲ್ಲಿ 2/3 ರಷ್ಟು ಕಡಿಮೆ ಇಲ್ಲದಷ್ಟು ಬಹುಮತವಿರಬೇಕು.

18. ವಿಶೇಷ ಸಭೆ:-

ಕಾರ್ಯಕಾರಿ ಸಮಿತಿಗೆ ಅವಶ್ಯವೆಂದು ಕಂಡು ಬಂದಾಗ ಅಥವಾ ಮತ ಕೊಡುವ ಅಧಿಕಾರವುಳ್ಳ ಸದಸ್ಯರ ಸಂಖ್ಯೆ 1/3 ರಷ್ಟು ಸದಸ್ಯರು ಬರಹದ ಮೂಲಕ ಅಪೇಕ್ಷಿಸಿದಾಗ ಅಥವಾ ಸಂಘದ ನೋಂದಣಾಧಿಕಾರಿಗಳ ಆಜ್ಞೆಯ ಮೇರೆಗೆ ಅಪೇಕ್ಷಣೆ ಪತ್ರ ಬಂದ 30 ದಿನಗಳೊಳಗಾಗಿ ವಿಶೇಷ ಸರ್ವ ಸದಸ್ಯರ ಸಭೆಯನ್ನು ಕರೆಯಬಹುದು. ಕನಿಷ್ಠ ಪಕ್ಷ 21 ದಿನಗಳ ನೋಟೀಸನ್ನು ಎಲ್ಲಾ ಸದಸ್ಯರಿಗೂ ಕಳುಹಿಸತಕ್ಕದ್ದು. ನೋಟೀಸಿನಲ್ಲಿ ಸಭೆ ಸೇರತಕ್ಕ ಸ್ಥಳ, ದಿನಾಂಕ, ವೇಳೆ ಮತ್ತು ಚರ್ಚಿಸತಕ್ಕ ವಿಷಯಗಳನ್ನು ನಮೂದಿಸತಕ್ಕದ್ದು. ಯಾರಿಗಾದರೂ ನೋಟೀಸು ತಲುಪಿಲ್ಲ ಎಂಬ ಒಂದೇ ಕಾರಣದಿಂದ ಸಭೆಯ ಕಾರ್ಯಕಲಾಪಗಳು ಅಸಿಂಧುವಾಗಲಾರವು.

19. ಸಾಲಖೈರು ಆದ ಕೂಡಲೇ ವಾರ್ಷಿಕ ಲೆಕ್ಕಪತ್ರಗಳನ್ನು ಅಧ್ಯಕ್ಷರು/ ಕಾರ್ಯದರ್ಶಿ ತಯಾರಿಸಿಕೊಂಡು 1960ರ ಕಂಪನಿಗಳ ಕಾಯಿದೆಯ 296ನೇ ವಿಧಿಗಳನ್ವಯ ಅಧಿಕಾರ ಪಡೆದ ಆಡಿಟರ್‌ರವರಿಂದ ಆಡಿಟ್ ಮಾಡಿಸಿಕೊಂಡು ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಬೇಕು.

20. ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960ರ ಸೆಕ್ಷನ್ 13ರನ್ವಯ ವಾರ್ಷಿಕ ಸಭೆಯ ಅನುಮತಿಯನ್ನು ಪಡೆದ 14 ದಿನಗಳೊಳಗಾಗಿ ಕಾರ್ಯಕಾರಿ ಸಮಿತಿಯ ಸದಸ್ಯರ ಪಟ್ಟಿಯನ್ನು, ವಾರ್ಷಿಕ ಲೆಕ್ಕಪತ್ರಗಳನ್ನು ನೋಂದಣಾಧಿಕಾರಿಯವರಿಗೆ ಕಳುಹಿಸತಕ್ಕದ್ದು.

21. ತಿದ್ದುಪಡಿ:-

1960ರ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯ 9 ಮತ್ತು 10 ರ ವಿಧಿಗಳನ್ವಯ ಕ್ರಮ ಕೈಗೊಂಡು ನಿವೇದನಾ ಪತ್ರಿಕೆ ಮತ್ತು ನಿಬಂಧನೆಗಳನ್ನು ಅವಶ್ಯವೆನಿಸಿದರೆ ಬದಲಾಯಿಸಬಹುದು. ಇಂತಹ ತಿದ್ದುಪಡಿಯು ನೋಂದಣಾಧಿಕಾರಿಯವರಿಂದ ಅನುಮತಿ ಪಡೆದ ಮೇಲೆ ಜಾರಿಯಲ್ಲಿ ಬರುತ್ತದೆ.

22. ವಿಸರ್ಜನೆ:-

ಸಂಘವನ್ನು 1960ರ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯ 22 ಮತ್ತು 23ನೇ ವಿಧಿಗಳನ್ವಯ ಕ್ರಮ ಕೈಗೊಂಡು ವಿಸರ್ಜಿಸಬಹುದು.

23. ಸಂಯೋಜನೆ:-

1960ರ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯ 21ನೇ ವಿಧಿಗಳನ್ವಯ ಕ್ರಮ ಕೈಗೊಂಡು ಬೇರಾವುದೇ ನೋಂದಣಿಯಾಗಿರುವ ಸಂಸ್ಥೆಯಲ್ಲಿ ಕೂಡಿಕೊಳ್ಳಬಹುದು.

24. ಸಂಘದ ಸದಸ್ಯರಿಂದ ಅಥವಾ ಸರ್ಕಾರ ಸಾರ್ವಜನಿಕರಿಂದ ತನ್ನ ನಿಧಿಗೆ ಕಾಣಿಕೆ, ದೇಣಿಗೆ, ವಂತಿಗೆ, ಸಹಾಯ ಧನ ಹಾಗೂ ಸಾಲವನ್ನು ಸ್ವೀಕರಿಸಬಹುದು. ಅಲ್ಲದೆ ಸಂಘದ ನಿಧಿಯನ್ನು ಉತ್ತಮಗೊಳಿಸಿಕೊಳ್ಳುವ ಸಲುವಾಗಿ ಸಹಾಯಾರ್ಥ ಪ್ರದರ್ಶನ, ಸ್ಮರಣ ಸಂಚಿಕೆಯಲ್ಲಿ ಜಾಹೀರಾತು ಇತ್ಯಾದಿಗಳ ಮೂಲಕವೂ ಹಣವನ್ನು ಸ್ವೀಕರಿಸಬಹುದು. ಸಾರ್ವಜನಿಕರು ಮತ್ತು ಸದಸ್ಯರಿಂದ ವಸೂಲಾದ ಸದಸ್ಯತ್ವದ ಹಣವನ್ನು ವರಮಾನ ತೆರಿಗೆ ಕಾಯ್ದೆ 1961 ರಲ್ಲಿ ಅವಕಾಶವಿರುವಂತೆ ಅಂಚೆ ಕಛೇರಿ, ಸೇವಿಂಗ್ಸ್ ಬ್ಯಾಂಕ್, ರಾಷ್ಟ್ರೀಕೃತ ಬ್ಯಾಂಕ್, ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ ಅಥವಾ ರಾಜ್ಯ ಕೇಂದ್ರ ಸರ್ಕಾರದ ಉಳಿತಾಯ ಪತ್ರಗಳಲ್ಲಿ ವಿನಿಯೋಗಿಸುವುದು ಹಾಗೂ ಅಂತಹ ವಿನಿಯೋಗಗಳಿಂದ ಬರುವ ವರಮಾನವನ್ನು ಮಾತ್ರ ಸಂಘದ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು.

25. ಸಂಘದ ಸೌಲಭ್ಯಗಳು ನಿಯಮಾವಳಿಗೊಳಪಟ್ಟು ಧರ್ಮ, ಜಾತಿ, ಮತ ಭೇದವಿಲ್ಲದ ಎಲ್ಲರಿಗೂ ದೊರೆಯತಕ್ಕದ್ದು.

26. ಸಂಘದ ಲೆಕ್ಕಪತ್ರಗಳನ್ನು ವರಮಾನ ತೆರಿಗೆ ಕಾಯ್ದೆ 1961ರ ಅನ್ವಯ ಅಧಿಕೃತ ಲೆಕ್ಕಪರಿಶೋಧಕರಿಂದ ಮಾರ್ಚ್ 31ಕ್ಕೆ ಅಂತ್ಯವಾಗುವ ಪ್ರತಿ ವರ್ಷವೂ ಪರಿಶೋಧನೆಗೆ ಒಳಪಡಿಸಬೇಕು.

27. ಅಲ್ಲದೆ ವರಮಾನ ಕಾಯಿದೆ 1961ರ ಸೆಕ್ಷನ್ 2(15), 11, 12, 13 ಮತ್ತು 80ಜಿ ಗಳಿಗೆ ವ್ಯತಿರಿಕ್ತವಾಗಿರುವಂತಹ ಯಾವುದೇ ತಿದ್ದುಪಡಿಗಳನ್ನು ವರಮಾನ ತೆರಿಗೆ ಆಯುಕ್ತರ ಪೂರ್ವ ಮಂಜೂರಾತಿಯನ್ನು ಪಡೆಯದೆ ಸಂಘದ ನಿಯಮಾವಳಿಗಳಿಗೆ ತರಬಾರದು.

28. ಸಂಘದ ವಿಸರ್ಜನೆ:-

ಯಾವುದೇ ನ್ಯಾಯಬದ್ಧವಾದ ಸಮಂಜಸವಾದ ಕಾರಣಕ್ಕಾಗಿ ಸಂಘವನ್ನು ವಿಸರ್ಜಿಸಬೇಕಾದಲ್ಲಿ, ಅಂತಹ ಗೊತ್ತುವಳಿಯನ್ನು ಸರ್ವ ಸದಸ್ಯರ ಸಭೆಯಲ್ಲಿ ಹಾಜರಿದ್ದ ಸದಸ್ಯರ 2/3 ಬಹುಮತದಿಂದ ತೀರ್ಮಾನಿಸಬೇಕು, ಹಾಗೂ ಅಂತಹ ಸಂದರ್ಭದಲ್ಲಿ ಸಾಲ, ಹೊಣೆಗಾರಿಕೆ ಎಲ್ಲವೂ ತೀರ್ಮಾನವಾದ ನಂತರ ಉಳಿದ ಆಸ್ತಿ, ಹಣವನ್ನು ಇಂತಹದೇ ಉದ್ದೇಶ ಹೊಂದಿರುವ ಹಾಗೂ ವರಮಾನ ತೆರಿಗೆ ಕಾಯಿದೆ 1961ರ ಸೆಕ್ಷನ್ 80ಜಿ ಅನ್ವಯ ಮಾನ್ಯತೆ ಪಡೆದ ಯಾವುದಾದರೂ ಸಂಸ್ಥೆಗೆ ವರ್ಗಾಯಿಸತಕ್ಕದ್ದು.

29. ಸಾಲಾಖೈರು ಆದ ಕೂಡಲೇ ವಾರ್ಷಿಕ ಲೆಕ್ಕಪತ್ರಗಳನ್ನು ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿ ತಯಾರಿಸಿಕೊಂಡು 1960ರ ಮೇರೆಗೆ ಕಂಪನಿಗಳ ಕಾಯಿದೆಯ 296ನೇ ವಿಧಿಗಳನ್ವಯ ಅಧಿಕಾರ ಪಡೆದ ಆಡಿಟರವರಿಂದ ಆಡಿಟ್ ಮಾಡಿಸಿಕೊಂಡು ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಬೇಕು.

## 30. ಪದಾಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳು:-

### ಅಧ್ಯಕ್ಷರು:-

ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ಸಭೆಗಳನ್ನು ನಡೆಸುವುದು ಕಾರ್ಯಕಾರಿ ಸಮಿತಿಯ ಸಭೆಯನ್ನು ನಡೆಸುವುದು. ಸಂಘಕ್ಕೆ ಸಂಬಂಧಪಟ್ಟ ವ್ಯವಹಾರಗಳಲ್ಲಿ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯನ್ನು ನಡೆಸುವುದು ಹಾಗೂ ನಿರ್ಣಾಯಕ ಮತವನ್ನು ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ. ವಿಶೇಷ ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿ ಸಭೆಯನ್ನು ಕರೆಯುವ ಅಧಿಕಾರ ಇರುವುದು.

### ಉಪಾಧ್ಯಕ್ಷರು:-

ಅಧ್ಯಕ್ಷರವರ ಸಂಘದ ಕೆಲಸಗಳಲ್ಲಿ ನೆರವಾಗುವುದು ಮತ್ತು ಅವರ ಗೈರು ಹಾಜರಿಯಲ್ಲಿ ಆ ದಿನದ ಕರ್ತವ್ಯ ನಿರ್ವಹಿಸುವುದು.

### ಗೌರವ ಕಾರ್ಯದರ್ಶಿ:-

ಗೌರವ ಕಾರ್ಯದರ್ಶಿಯವರು ಕಾರ್ಯಕಾರಿ ಸಮಿತಿಯ ವಾರ್ಷಿಕ ಮಹಾಸಭೆ ಮತ್ತು ಸದಸ್ಯರ ಇತರ ಸಭೆಗಳನ್ನು ಏರ್ಪಡಿಸುವುದು. ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನವಾದಂತಹ ವಿಷಯಗಳಲ್ಲಿ ಖಾಸಗಿ, ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳು ಮತ್ತು ಸಂಬಂಧಪಟ್ಟ ಇಲಾಖೆಗಳೊಡನೆ ವ್ಯವಹರಿಸುವುದು. ಸಭೆಯ ನಡವಳಿಕೆಯನ್ನು ಬರೆಯುವುದು, ಲೆಕ್ಕ ಪತ್ರಗಳನ್ನು ಬರೆಯುವುದು, ಸಂಘದ ಸದಸ್ಯರಿಂದ, ದಾನಿಗಳಿಂದ, ಖಾಸಗಿ, ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳಿಂದ ಚಂದಾ, ದಾನ ಮತ್ತು ಕೊಡುಗೆಗಳನ್ನು ಸ್ವೀಕರಿಸುವುದು.

ಸಂಘದ ಲೆಕ್ಕಪತ್ರಗಳನ್ನು ತಪ್ಪದೆ ಪ್ರತಿ ವರ್ಷವು ಕಾಲ ಕಾಲಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಲ್ಲಿ ವ್ಯವಹರಿಸುವುದು ಹಾಗೂ ಕೋರ್ಟ್, ಕಛೇರಿ ವ್ಯವಹಾರಗಳನ್ನು ನೋಡಿಕೊಂಡು ಬರುವುದು.

ಕರ್ನಾಟಕ ಯುರೋಲಜಿ ಅಸೋಸಿಯೇಷನ್‌ನ ಸಂವಿಧಾನ, ಕಾನೂನು ಮತ್ತು ಕಾಯಿದೆಗಳಲ್ಲಿ, ಆದ ಎಲ್ಲಾ ಬದಲಾವಣೆಗಳನ್ನು, ಕಾರ್ಯಕಾರಿ ಸಮಿತಿಯ ಕನಿಷ್ಠ 3 ಜನರ ಸಹಮತಿ ಪಡೆದು, ಅವನ್ನು ಕರ್ನಾಟಕ ಸರ್ಕಾರದ ಸಂಘ ಸಂಸ್ಥೆಗಳ ರಿಜಿಸ್ಟ್ರಾರ್‌ರವರಿಗೆ ತಲುಪಿಸುವ ಹೊಣೆ ಕೂಡ ಅವರದ ಆಗಿರುತ್ತದೆ.

**ಖಜಾಂಚಿ:-**

ಸದಸ್ಯರಿಂದ, ದಾನಿಗಳಿಂದ, ಸಂಸ್ಥೆಗಳಿಂದ ವಂತಿಗೆ, ಕೊಡುಗೆ, ದಾನ ಇತ್ಯಾದಿಗಳನ್ನು ಸ್ವೀಕರಿಸಿ ಅವರಿಗೆ ರಸೀತಿಯನ್ನು ನೀಡುವುದು. ಬಂದಂತಹ ಹಣವನ್ನು ಜಮಾ ಮಾಡಿ ಅದರ ರಸೀತಿಯನ್ನು ಸಂಘದ ಅಧ್ಯಕ್ಷರು ಅಥವಾ ಗೌರವ ಕಾರ್ಯದರ್ಶಿಯವರಿಗೆ ಒಪ್ಪಿಸುವುದು.

ಸಂಘದ ಧನವನ್ನು ಖಜಾಂಚಿ ನಿರ್ವಹಿಸುತ್ತಾರೆ. ಖಜಾಂಚಿಯು ಈ ಕೆಳಗಿನ ಹೊಣೆಗಾರಿಕೆಗಳಿಗೆ ಬದ್ಧರಾಗಿರುತ್ತಾರೆ.

i. ಕಾರ್ಯಕಾರಿ ಸಮಿತಿಯ ನಿರ್ಧಾರದಂತೆ ಬಂಡವಾಳ ಹೂಡಿಕೆ ಮತ್ತು ಪಾವತಿಗಳಿಗೆ,
ii. ಲೆಕ್ಕ ಪತ್ರಗಳನ್ನು ನಿರ್ವಹಿಸಲು
iii. ಕರ್ನಾಟಕ ಯುರೋಲಜಿ ಅಸೋಸಿಯೇಷನ್‌ಗೆ ಸಂಬಂಧಿಸಿದ ಎಲ್ಲಾ ಲೆಕ್ಕಗಳ ಪರಿಶೋಧನೆಗೆ
iv. ಮತ್ತು ಅಸೋಸಿಯೇಷನ್‌ನ ಎಲ್ಲ ಬ್ಯಾಂಕ್ ಖಾತೆಗಳು, ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಂದ ಜಂಟಿಯಾಗಿ ನಿರ್ವಹಿಸಲ್ಪಡುತ್ತಿವೆ (ಪಾವತಿ ಮತ್ತು ಹಣ ಪಡೆಯುವ ಸಂದರ್ಭಗಳು) ಎನ್ನುವುದನ್ನು ಖಚಿತಪಡಿಸಿಕೊಳ್ಳುವಿಕೆಗೆ.

1. (A. Mohan)
2. (Manohar Mamani)
3. (Kishoramoorthy R)
4. (Arun Chawla)
5. (Manjunath Shetty)
6. (Siddalingeshwar Neeli)
7. V. Sreedhar Reddy (Sreedhar Reddy)

ಸಂಘದ ಹೆಸರು: ಕರ್ನಾಟಕ ಯುರಾಲಜಿ ಅಸೋಸಿಯೇಷನ್
ದಾಖಲೆಗಳ ವಿವರ: ನಿಯಮ ನಿಬಂಧನೆಗಳು
ಸ್ವೀಕರಿಸಿದ ದಿನಾಂಕ: 08-07-09
ನೋಂದಣಿ ಸಂಖ್ಯೆ: 372/09-10
ರಿಜಿಸ್ಟರ್‌ನಲ್ಲಿನ ಕ್ರಮಸಂಖ್ಯೆ: 372/09-10
ಪರಿಶೀಲನಾ ವಿವರ: ನೋಂದಾಯಿಸಿದೆ
ದಿನಾಂಕ: 10-07-09

ಸಂಘಗಳ ನೋಂದಣಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲೆ.

ದಸ್ತಾವೇಜು ಸಂಖ್ಯೆ 07 ____ ರ ಪುಟಸಂಖ್ಯೆ

# ಕರ್ನಾಟಕ ಯುರೋಲಜಿ ಅಸೋಸಿಯೇಷನ್

(Karnataka Urology Association)

ನಂ.713/ಬಿ, 11ನೇ ಕ್ರಾಸ್, 5ನೇ ಮೇನ್, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು-560 040.

## ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿ

| ಕ್ರ.ಸಂ. | ಹೆಸರು ಮತ್ತು ವಿಳಾಸ | ವಯಸ್ಸು | ಉದ್ಯೋಗ | ಪದವಿ | ರುಜು |
|---|---|---|---|---|---|
| | ಶ್ರೀಮತಿ/ ಶ್ರೀಯುತರಾದ:- | | | | |
| 1. | ಡಾ|| ಎ. ಮೋಹನ್<br>ಗೋಕುಲ ಸದನ, ನಂ. 26/17<br>ಎನ್.ಆರ್. ಕಾಲೋನಿ,<br>ಬೆಂಗಳೂರು-19. | 52 ವ | ವೈದ್ಯರು | ಅಧ್ಯಕ್ಷರು |  |
| 2. | ಡಾ|| ಮನೋಹರ್ ಮಾಮನಿ,<br>ಸ್ಪೆಷಾಲಿಟಿ ಕೇರ್ ಸೆಂಟರ್, 4ನೇ ಮೇನ್,<br>ರಾಮ್ & ಕಂಪನಿ ಸರ್ಕಲ್,<br>ಪಿ.ಜೆ. ಎಕ್ಸ್‌ಟೆಂಷನ್, ದಾವಣಗೆರೆ. | 46 ವ | ವೈದ್ಯರು | ಉಪಾಧ್ಯಕ್ಷರು |  |
| 3. | ಡಾ|| ಕೇಶವ ಮೂರ್ತಿ ಆರ್.<br>ನಂ. 713/ಬಿ, 11ನೇ ಕ್ರಾಸ್,<br>5ನೇ ಮೇನ್, ಎಂ.ಸಿ.ಲೇಔಟ್,<br>ವಿಜಯನಗರ, ಬೆಂಗಳೂರು-40. | 43 ವ | ವೈದ್ಯರು | ಪ್ರಧಾನ ಕಾರ್ಯದರ್ಶಿ |  |
| 4. | ಡಾ|| ಅರುಣ್ ಚಾವ್ಲ,<br>ನಂ. 16/4, ಕೆ.ಎಂ.ಸಿ. ಕ್ವಾರ್ಟ್ರಸ್,<br>ಮಣಿಪಾಲ್, ಕರ್ನಾಟಕ 576104. | 46 ವ | ವೈದ್ಯರು | ಖಜಾಂಚಿ |  |

ದಸ್ತಾವೇಜು ಸಂಖ್ಯೆ 372/09-10 ರ ಪುಟಸಂಖ್ಯೆ 16

| | | | | |
|---|---|---|---|---|
| | ಡಾ|| ಮಂಜುನಾಥ ಶೆಟ್ಟಿ<br>ನಂ.24-4-327-5,<br>ಉಮಾಮಹೇಶ್ವರಿ ದೇವಸ್ಥಾನ ಹಿಂಬದಿ ಪರಿಸರ,<br>ಅತ್ತಾವರ್, ಮಂಗಳೂರು,ದ.ಕ 575001. | 45 ವ. | ವೈದ್ಯರು ಸದಸ್ಯರು |  |
| 6. | ಡಾ|| ಸಿದ್ದಲಿಂಗೇಶ್ವರ ನೀಲಿ,<br>ಫ್ಲಾಟ್ ನಂ.8, ಓಂ ನಗರ,<br>ವಿದ್ಯಾನಗರ, ಹುಬ್ಬಳ್ಳಿ,<br>ಧಾರವಾಡ 580 031. | 36 ವ. | ವೈದ್ಯರು ಸದಸ್ಯರು |  |
| 7. | ಡಾ|| ಶ್ರೀಧರ್ ರೆಡ್ಡಿ<br>ನಂ. 13/3, ಕೆ.ಎಂ.ಸಿ. ಕ್ವಾರ್ಟ್ಸ್,<br>ಮಣಿಪಾಲ್, ಕರ್ನಾಟಕ 576104. V. Sreedhar Reddy | 42 ವ. | ವೈದ್ಯರು ಸದಸ್ಯರು |  |

| ಸಾಕ್ಷಿಗಳು ಹೆಸರು ಮತ್ತು ವಿಳಾಸ | ವಯಸ್ಸು | ಉದ್ಯೋಗ | ರುಜು |
|---|---|---|---|
| 1. Dr. Chandrashekar S. Ratkal<br>Professor & Head of the Department,<br>Department of Urology<br>Institute of Nephro-Urology<br>Victoria Hospital Campus, Bangalore: 560002 | 50 yrs | Professor of Urology | 7/7/09 |
| 2. Dr. Chandrashekar C.R<br>Professor of Urology<br>Institute of Nephro-Urology<br>Victoria Hospital Campus<br>Bangalore: 560002 | 54 yrs | Professor of Urology | |

ದಸ್ತಾವೇಜು ಸಂಖ್ಯೆ 372/09-10 ರ ಪುಟಸಂಖ್ಯೆ 17

ಜಿ.ನೋಂ.

ಸಂಘದ ಹೆಸರು: [illegible]

ದಾಖಲೆಗಳ ವಿವರ: [illegible]

ಸ್ವೀಕರಿಸಿದ ದಿನಾಂಕ: 08-07-09

ನೋಂದಣಿ ಸಂಖ್ಯೆ: 372/09-10

ರಿಜಿಸ್ಟರ್‌ನಲ್ಲಿನ ಕ್ರಮಸಂಖ್ಯೆ: 372/09-10

ವಿಲೇವಾರಿ ವಿವರ: [illegible]

ದಿನಾಂಕ: 10-07-09

ಸಂಘಗಳ ನೋಂದಣಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲೆ